

■ ಗಾಯತ್ರಿ ಯತಿರಾಜ್

ಕಲೆ: ಆಶಾರಾಣಿ ನಡೋಣಿ

ಅರುಂಧತಿ ಇಂದು ಎಂದಿಗಿಂತಲೂ ತುಸು ಹೆಚ್ಚೇ ಸುಂದರಿಯಾಗಿ ಕಾಣಿಸ್ತಿದ್ದಾಳೆ. ಏನೋ ಕಳೆ! ಸುಮಾ ಅದನ್ನು ಗಮನಿಸಿದರೂ ತೋರಿಸದೆ ಕಟುವಾಗಿ,

'ನೋಡಿಲ್ಲಿ ಆರು! ಇನ್ನು ನೀನು ನನ್ನ ನೋಡೋಕ್ಕೆ ಬರ್ತೀನಿ ಅಂತ ಹೇಳಿ ಅವನ ಜೊತೆ ಸುತ್ತೋದನ್ನ ನಿಲ್ಲಿಸಿಬಿಡು. ಪಾಪ! ನಿನ್ನ ಗಂಡ ತೋರ್ಸೋ ಕಾಳಜಿ ನೋಡಿದ್ರೆ, ಅವ್ರಿಗೆ ನೀನು ನನ್ನ ಜೊತೇಲೆ ಇದ್ದೀಯ ಅಂತ ಸುಳ್ಳು ಹೇಳಬೇಕಾದರೆ ಮಾತು ಗಂಟಲಲ್ಲೇ ಸಿಕ್ಕಿ ಹಾಕ್ಕೊಳುತ್ತೆ. ನಾನು ಹೀಗಂತೀನಿ ಅಂತ ಬೇಜಾರು ಮಾಡ್ಕೋಬೇಡ. ಈ ವಯಸ್ಸಲ್ಲಿ ಬೇಕೇನೆ ಅರು ನಿಂಗೆ ಇದೆಲ್ಲಾ? ನೀನು ಮಾಡ್ತಾ ಇರೋದು ಅನೈತಿಕ ಅಂತ ನಿಂಗೆ ಅನ್ಸೋಲ್ವಾ? ಸ್ಕೂಲ್, ಕಾಲೇಜಲ್ಲೇ ಅದೆಷ್ಟು ಹುಡ್ಗರು ನಿನ್ನಿಂದೆ ಬಿದ್ದಿದ್ರೂ ನೀನು ಯಾರನ್ನೂ ಕಣ್ಣೆತ್ತಿ ನೋಡಿದೋಳಲ್ಲಾ. ಈಗೇನೇ ಆಗಿರೋದು ನಿಂಗೇ? ಎಷ್ಟು ಒಳ್ಳೇ ಗಂಡ! ಅಷ್ಟು ದೊಡ್ಡ ಮನೆಗೆ ಮಹಾರಾಣಿ ತರಹ ಇದ್ದೂ ಇದು ಬೇಕೇನೇ ನಿಂಗೆ? ನೀನೇನು ಕಳ್ಕೋತಾಯಿದ್ದೀಯಾ ಅಂತ ನಿಂಗೊತ್ತಾ'

ನಿಜ ಕಣೆ! ನೀ ಹೇಳಿದ್ದೂ ನಿಜ... ಯಾವ ಗಂಡಸರನ್ನು ಕಣ್ಣೆತ್ತಿ ನೋಡದ ನನಗೆ ಮದುವೆ, ಗಂಡ, ಮಕ್ಕಳು ಅಂದರೆ ಬೇರೆಯದ್ದೇ ಕಲ್ಪನೆಯಿತ್ತು. ಕಣ್ಣಲ್ಲಿ ಬಣ್ಣ ಬಣ್ಣದ ಕನಸಿತ್ತು. ಬಣ್ಣದ ಜೀವನ ಬಿಡು, ಮದುವೆಯ ಸಹಜ ಜೀವನವೇ ಹುಸಿಯಾದಾಗ ಇನ್ನು ಅಲ್ಲಿ ಪ್ರೀತಿಯ ಮಾತೆಲ್ಲಿ? ಹಾಗಂತ ಶೃಂಗಾರವೊಂದೇ ಮಧುರ ದಾಂಪತ್ಯಕ್ಕೆ ಸೋಪಾನ ಎಂದು ನಾನು ಹೇಳುತ್ತಿಲ್ಲ. ದೇಹದ ಮತ್ತಿನ್ಯಾವುದೇ ಅಂಗನ್ಯೂನತೆಯಂತೆಯೇ ಇದೂ ಒಂದು ಸಮಸ್ಯೆಯಷ್ಟೇ, ಕೈ ಕಾಲು ಇರದಿದ್ದರೆ ನಾನು ಅವರನ್ನು ಪ್ರೀತಿಸುತ್ತಿರಲಿಲ್ಲವೇ ಎನ್ನಿಸಿ, ನಾನೆಷ್ಟೇ ಅದನ್ನು ಮರೆತು, ಅವರನ್ನು ಸಹಜವಾಗಿ ಅವರು ಹೇಗಿದ್ದಾರೋ ಹಾಗೆ ಅಪ್ಪಿ ಸ್ವೀಕರಿಸ ಹೋದರೂ ಅವರದೇ ದೌರ್ಬಲ್ಯದ ಕೀಳರಿಮೆಯಿಂದ ನನ್ನ ದೂರವಿಡುತ್ತಿದ್ದಾರೆ. ನಾನೇನು ಮಾಡ್ಲಿ? ಪ್ರೀತಿ ತೋರಿಸಿದರೆ ನಾನು ಅದನೆಲ್ಲಿ ನಿರೀಕ್ಷಿಸುತ್ತೇನೋ ಎಂದೋ ಅಥವಾ ಹೃದಯ ಊನರೋ ಪ್ರೀತಿಯ ನೆರಳೂ ಕೂಡ ಅವರಲ್ಲಿ ಕಾಣೆನು. ಜೊತೆಗೆ ಮಗನ ದೌರ್ಬಲ್ಯ ಗೊತ್ತಿದ್ದೋ, ಗೊತ್ತಿಲ್ಲದೆಯೋ ನನ್ನ ಮೇಲೆ ಗೂಬೆ ಕೂರಿಸಿ ಬಂದವರೆದುರಿಗೆಲ್ಲ ಕುಟುಕೋ 'ಅತ್ತೆಗೆ ನಾನು ಬಂಜೆಯಲ್ಲ!' ಅಂತ ಒಂದು ಮೆಡಿಕಲ್ ಸರ್ಟಿಫಿಕೇಟ್ ತಂದು ಫ್ರೇಮ್ ಹಾಕಿ ಗೋಡೆಗೆ ನೇತಾಕಿ ಚೀರಿಡಬೇಕೆನ್ನಿಸುತ್ತದೆ. ಸುಮಿ, ನನಗೆ ಹೆಂಡತಿ ಅನ್ನುವ ಕಿಂಚಿತ್ತು ಪ್ರೀತಿಯನ್ನಾದರೂ ತೋರಿಸಿದ್ದರೆ ಸಂತಾನಹೀನತೆ ಒಂದು ಚಿಂತೆ ಅನ್ನಿಸುತ್ತಲೇ ಇರಲಿಲ್ಲ ಕಣೆ.



ನಿಂಗರ್ಥ ಆಗಲ್ಲ ಬಿಡು. ಒಂದು ಮಗು ಅಂತ ಆಗಿ 'ಅಮ್ಮ' ಅನ್ನಿಸ್ಕೊಂಡಿರೋ ನಿಂಗೆ ಈ ಮಗು ಇಲ್ದೆ ಇರೋರ ಕಷ್ಟ ಏನೂ ಅಂತನಾದ್ರೂ ಅಂದಾಜಿದೆನಾ ಸುಮಿ? ನಿಂಗೊತ್ತಾ, ನಾನು ಅದೆಷ್ಟು ಟೆಸ್ಟ್ ಮಾಡ್ಸಿದ್ದೀನಿ ಅಂತ? ಪ್ರಾಬ್ಲಮ್ ನನ್ನಲ್ಲಿ ಇಲ್ಲ ಅಂತ ಮೊದಲ ರಾತ್ರಿಯಲ್ಲೇ ಗೊತ್ತಾದರೂ ಸಮಾಜದ ದೃಷ್ಟಿಯಲ್ಲಿ ಮಗುವಾಗಿಲ್ಲ ಅಂದ್ರೆ ಕಣ್ಣಿಗೆ ಬೀಳೋದು ಹೆಣ್ಣೇ! ಇರಲಿ, ಅದು ಬಿಡು. ಸಮಸ್ಯೆ ಎಲ್ಲಿದೆ ಅಂತ ಗೊತ್ತಾದ ಮೇಲೂ ಡಾಕ್ಟರ್ಸ್ ಹತ್ತಿರ ನನ್ನನ್ನೇ ಮೊದಲಿಗೆ ಬಲಿ ಕೊಡೋದು ಎಂಥಾ ನೈತಿಕವೇ? ಅದೂ ಒಂದಾ ಎರಡಾ? ಅದೆಷ್ಟು ಟೆಸ್ಟ್? ಅದೆಷ್ಟು ಹಾಸ್ಪಿಟಲ್? ಹೋದಲ್ಲೆಲ್ಲಾ ಡಾಕ್ಟರ್ಸ್ ಕೈ ಗವುಸನ್ನು ಏರಿಸಿಕೊಂಡು ನನ್ನ ಹತ್ರ ಬರ್ತಾಯಿದ್ರೆ ನಾನಲ್ಲೇ ಸತ್ತು ಹೋಗಬಾರದಾ ಅನ್ನಿಸಿದ್ದಿದೆ. ಅದೆಷ್ಟು ಬಾರಿ ಸತ್ತು ಹೋಗಿದ್ದೇನೋ?!

ಎಲ್ಲಾ ಪರೀಕ್ಷೆಗಳು ಮುಗಿದ ಮೇಲೆ ಕೊನೆಯದಾಗಿ HSG ಮಾಡ್ಸಿ ಅಂದಿದ್ರು. ಆ ಟ್ಯೂಬ್ ಟೆಸ್ಟ್ ಬರೋಬ್ಬರಿ 45 ನಿಮಿಷ! ಬೇರಿಯಮ್ ಸಲ್ಫೇಟ್ ದ್ರಾವಣವನ್ನು ಗರ್ಭಾಶಯದ ಮೂಲಕ ಗರ್ಭನಾಳಗಳವರೆಗೂ ಹರಿಯಲು ಬಿಟ್ಟು ಎಕ್ಸ್‌ರೇ ಮಾಡುತ್ತಾರೆ. ಅಷ್ಟು ಹೊತ್ತು ಗೌನಿನ ಒಳಗಡೆ ಏನೂ ಇಲ್ಲದೇ, ಎಚ್ಚರವಿದ್ದುಕೊಂಡೆ, ತೆರೆದುಕೊಂಡು ಬಿದ್ದಿರೋದು ಹೆಣ್ಣಾದವಳಿಗೆ ಸುಲಭಾನಾ? ಹೀಗೆ ಅನವಶ್ಯಕವಾಗಿ ನನ್ನ ಇಂತಹ ಪರೀಕ್ಷೆಗಳಿಗೆ ಒಡ್ಡೋದು ಸರಿಯೇನೇ? ಅಲ್ಲಿಗೂ ಆ ಟೆಸ್ಟ್ ಮಾಡೋರು ಹೆಣ್ಣಾಗಿರಬೇಕು ಅನ್ನೋ ಕನಿಷ್ಠ ಜಾಗ್ರತೆಯೂ ಇಲ್ದೇ ಅಲ್ಲೂ ಗಂಡಸರನ್ನು ಹಾಕೋ ಈ ಆಸ್ಪತ್ರೆಯಂಥ ನರಕದಲ್ಲಿ, ಅವ್ನೂ ಅದೆಷ್ಟೇ ಸಾರಿ ಬಂದು ಕೈ ಹಾಕಿದರೂ ಏನೂ ಮಾತಾಡದೆ ಸುಮ್ನೆ ತೆರೆದಿಟ್ಟು ಬಿದ್ದಿರೋದು? ನಿಮಿಷಕ್ಕೊಂದು ಬಾರಿ (ಅಗತ್ಯವಿದೆಯೋ ಇಲ್ವೋ ಯಾರಿಗೊತ್ತು) ಅಲ್ಲಿ ಬಗ್ಗಿ ನೋಡುತ್ತಾ ನನ್ನನ್ನೊಮ್ಮೆ ಇವಳು ಸಿಗಬಹುದಾ ಅಂತ ಕೆಟ್ಟ ದೃಷ್ಟಿಯಲ್ಲಿ ಕಾಡುತ್ತಾ, ಯಾವುದೋ ಬಾರದ ಹಾಡನ್ನು ವಿಷಲ್‌ನಲ್ಲಿ ಹಾಕುವ ಸುಳ್ಳೇ ಪ್ರಯತ್ನ ಮಾಡುತ್ತಾ ನನ್ನ ತಿನ್ನೋ ಹಾಗೆ ನೋಡ್ತಾಯಿದ್ದ ಆ ಟೆಕ್ನೀಶಿಯನ್? ಅದು ಓಕೆ ನಾ? ಹೀಗೆ ಸುಳ್ಳೇ ಸುಳ್ಳೇ ನನ್ನನ್ನು ನರಕಯಾತನೆಗೆ ದೂಡಿದ ಆ ಗಂಡ ಅನ್ನೋ ಪ್ರಾಣಿ ನನ್ನ ಮುಂದೇನಾದ್ರೂ ಬಂದಿದ್ರೆ, ಕತ್ತು ಹಿಚುಕಿ ಕೊಂದು ಬಿಟ್ಟಿರ್ತಿದ್ದೆ. ಜೊತೆಗೆ ಅವ್ನಮ್ಮನ್ನೂ.

ಅದೂ ಅಲ್ಲದೆ ಯಾರದ್ದೇ ಅನೈತಿಕಾ? ಆ ನಾಗದೋಷ ಪರಿಹಾರ ಪೂಜೆಗೆ ಬರೋ ಪುರೋಹಿತ ಪೂಜೆಯುದ್ದಕ್ಕೂ ನನ್ನ ನೋಡಿ ಕಿಸಿಯೋದಾ? ಆ ಇನ್ಫರ್ಟಿಲಿಟಿ ಕ್ಲಿನಿಕ್‌ಗೆ ಹೋಗಿ ನನ್ನನ್ನ ಯಾವುದೇ ಮುಜುಗರ ಇಲ್ಲದೇ ಪ್ರಾಣಿತರಹ ಬಿಚ್ಕೊಂಡ್ ಬಿದ್ದಾಗ, 'ನಿಮ್ಮಲ್ಲೇನೂ ಪ್ರಾಬ್ಲಮ್ ಇಲ್ಲ ನೀವು ಓಕೆ ಅಂದ್ರೆ ನಾನು ಹೆಲ್ಪ್ ಮಾಡ್ತೀನಿ' ಅಂತ ಕೈ ಅದುಮೋ ಆ